Reg No. B G 155 15-3-1969

52 nd Year of Publication

SATYAVADI Daily, MYSORE 4

ಸತ್ಯವಾದಿ

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ
ಸ್ಥಳದಲ್ಲಿ ತಿಂಗಳಿಗೆ ಚಂದಾ 40 ನೈಸೆ
ಅಂಚೆವೆಚ್ಚ ಸೇರಿ ವರ್ಷಕ್ಕೆ ರೂ 16-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ.

ಸ್ಥಾಪಕರು : ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ನೈಸೆ

ಪಾಕಿಸ್ತಾನಕ್ಕೆ ರಷ್ಯಾ ಟ್ಯಾಂಕುಗಳು

ಮೈಸೂರು ನಜರ್‌ಬಾದ್ ರಾಣಾ ಸ್ಯಾಲೇಸ್ ಆವರಣದಲ್ಲಿ ಹಾಕಿರುವ
— ನಮ್ಮ ಸ್ವಂತ ಥಿಯೇಟರ್‌ನಲ್ಲಿ —
11-3-69 ರಿಂದ ಪ್ರಾರಂಭ — ಪ್ರತಿದಿನ ಸಂಜೆ 6-30 ರಿಂದ 12-30 ರವರೆಗೆ

ವಿವಿಧ ವಿನೋದಾವಳಿಗಳು

ಮಲಬಾರಿನ ಸುರಿತ ಸರ್ಕಸ್‌ನವರಿಂದ ಸರ್ಕಸ್
ಎಲ್. ವಿ. ಬಾಬುರವರ ಮ್ಯಾಜಿಕ್ — ಆಂಧ್ರದ ನರ್ತಕಿಯರಿಂದ ನರ್ತನ

"ಸತ್ಯವಾದಿ" ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವವನ್ನು ಬೇಗನೇ ನೆನೆವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮತ್ತಿತರ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯವರು, ಶ್ರೀ ಮಾಧವ್ ಶೆನ್ನಾ ರವರು, ಶ್ರೀ ಎಂ. ಬಿ. ಬಸವಯ್ಯನವರು, ಆಪೆರಾ ಟ್ರೂಕೇಸಿನವರು, ಪದ್ಮಭೂಷಣ ನೇತ್ರದಾನಿ ಡಾ|| ಎಂ.ಸಿ.ಮೋದಿಯವರು ಡಾ || ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಗೊ) ಶಾಸ್ತ್ರಧರ್ಮನಿರತ ಶ್ರೀ ಅನಂತ ನರಸಿಂಹಯ್ಯಂಗಾರ್ (ಹೊಂಗನೂರು) ರವರೂ ಶುಭಾಶಯದೊಡನೆ ನೆರವು ನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸಂಪಾದಕ 'ಸತ್ಯವಾದಿ'
ಚಾಮರಾಜಪುರಂ, ಮೈಸೂರು 4

★

ಪುರಸಭೆ

ಮೈಸೂರು— ಮುಂದೂಡಲಾದ ಪುರಸಭಾಧಿವೇಶವು ತಾ|| 18 ರಂದು ಮಧ್ಯಾಹ್ನ ಎರಡೂವರೆ ಗಂಟೆಗೆ ನಡೆಯುವುದು.

ವಿನೋಧ ಸದಸ್ಯರ ಧರಣ ಸತ್ಯಾಗ್ರಹ

ಬೆಂಗಳೂರು— ಎಲ್ಲ ವಿಧದ ಭೂ ಕಂದಾಯವೂ ಹಿಂದಿನ ದರದಂತೆ ವಸೂಲ್ಮಾಡಲಾಗುವುದೆಂದು ಸರಕಾರ ಭರವಸೆ ಕೊಡುವವರೆಗೆ ವಿನೋಧ ಸದಸ್ಯರು ನಿನ್ನೆ ಶಾಸನಸಭೆಯಲ್ಲಿ ಧರಣ ಸತ್ಯಾಗ್ರಹ ಪ್ರಾರಂಭಿಸಿದರು — ಸ್ಪೀಕರರು ಸಭೆಯನ್ನು ಸೋಮವಾರಕ್ಕೆ ಮುಂದುವರಿಸಿದರು.

★

ಭಾರತ ಪ್ರದೇಶ

ನವದೆಹಲಿ— ನಮ್ಮ ಗಡಿಯನ್ನು ಕುಗ್ಗಿಸುವ ವಿಷಯವಿಲ್ಲವೆಂದೂ, ರಾಜ್ಯಾಂಗದಲ್ಲಿ ನಿಷ್ಪರ್ಷೆಯಾಗಿರುವಷ್ಟು ಇದೆ ಎಂದೂ ರಾಜ್ಯಸಭೆಯಲ್ಲಿ ತಿಳಿಸಲಾಯಿತು — ಭಾರತದ ಭೂ ಭಾಗ 1934 ರಲ್ಲಿ 4881339.3 ಚದುರ ಕಿಲೋಮಿಟರು ಇದ್ದಿತೆಂದೂ, 1968 ಜನವರಿ 1 ರವರೆಗೆ 3268090 ಚದುರ ಕಿಲೋಮಿಟರು ಇದ್ದಿತೆಂದೂ ತಿಳಿಸಲಾಯಿತು — ಬರ್ಮಾಕ್ಕೆ ಸ್ವಲ್ಪ ಸ್ಥಳವನ್ನೂ ಶರಣಾಗತಿ ಮಾಡಿಲ್ಲವೆಂದೂ ತಿಳಿಸಲಾಯಿತು — ಸದಸ್ಯ ಶ್ರೀ ಬಿ. ಬಿ. ದಾಸ್‌ರವರು, ವಿಶ್ವಸಂಸ್ಥೆ ವಾರ್ಷಿಕ ಪುಸ್ತಕದಲ್ಲಿದ್ದ ಭಾರತ ಪ್ರದೇಶವನ್ನು ವರ್ಷವರ್ಷಕ್ಕೆ ಓದಿ ಪತ್ತೆ ಸ ತೋರಿಸಿ, ಸ್ವಾತಂತ್ರ್ಯದ 21 ವರ್ಷ ಕಳೆದಿದ್ದರೂ ಸರಕಾರ ತನ್ನ ವಿಸ್ತೀರ್ಣ ಬಗ್ಗೆ ಖಚಿತವಾಗಿಲ್ಲವೆಂದರು.

★

ಪಾಕಿಸ್ಥಾನಕ್ಕೆ ರಷ್ಯಾ ಟ್ಯಾಂಕುಗಳು

ನವದೆಹಲಿ— ರಷ್ಯಾ ಪಾಕಿಸ್ಥಾನಕ್ಕೆ 40-60 ಟ್ಯಾಂಕು ಸರಬರಾಜು ಮಾಡಿ ಮಾಡಿರುವದೆಂಬ ವರದಿ ಸರಿಯೆಂದು ಪಾರ್ಲಿಮೆಂಟಿನ ಎರಡು ಸಭೆಗಳಲ್ಲೂ ತಿಳಿಸಲಾಯಿತು — ಇನ್ನು ಮುಂದಿನ ಕೆಲವು ವರ್ಷಗಳಲ್ಲಿ 200 ಅತಿ ನವೀನ ಟ್ಯಾಂಕುಗಳನ್ನು ಪಡೆಯಲಿಯೆಂದು ಹೇಳಲಾಗಿದೆ.

★

ಪ್ರಸಾದಕ್ಕಾ ತೆರಿಗೆ

ವಿಧೇಯಕ— ಪಳನಿ ದೇವಾಲಯದಲ್ಲಿ ಪ್ರಸಾದಕಾಗಿ ತಯಾರಿಸುವ 'ಪಂಚಾಮೃತ' ದ ಮೇಲೆ ಅಬ್ಕಾರಿ ತೆರಿಗೆ ವಿಧಿಸುವ ಯೋಜನೆಯನ್ನು ಪ್ರತಿಭಟಿಸಿ ಅದರ ವ್ಯಾಪಾರಿಗಳು ಗುರುವಾರ ಹರತಾಳ ಆಚರಿಸಿದರು.

★

ಕಾಶ್ಮೀರದ ಭ್ರಮೆ

ನವದೆಹಲಿ.... ಗಂಗಾನದಿ ನೀರು ಹಂಚಿಕೆ ಬಗ್ಗೆ ಭಾರತದೊಡನೆ ಮಂತ್ರಿ ಮಟ್ಟದ ಮಾತುಕತೆಗೆ ಒತ್ತಾಯ ಮಾಡುವದಾಗಿ ಪಾಕ್ ವಿದೇಶಾಂಗ ಮಂತ್ರಿ ಅರ್ಜದ್ ಹೇಳಿರುವದಾಗಿ ವರದಿಯಾಗಿದೆ — ಕಾಶ್ಮೀರ ಸಮಸ್ಯೆಯನ್ನು ವಿಶ್ವಸಂಸ್ಥೆ ಮುಂದೆ ತೆಗೆದುಕೊಂಡುಹೋಗಲು ತಾಷ್ಕೆಂಟು ಘೋಷಣೆ ಅಡ್ಡಿಪಡಿಸುವುದಿಲ್ಲವೆಂದೂ, ಬೇಕಾದಾಗ ಪಾಕಿಸ್ಥಾನ ವಿಶ್ವಸಂಸ್ಥೆಗೆ ತೆಗೆದುಕೊಂಡು ಹೋಗಬಹುದೆಂದೂ ಹೇಳಿರುವರು.

ಮೈಸೂರು ಉಪಕರಣಗಳ ಕಾರ್ಖಾನೆ
ಹಾಸನ
(ಮೈಸೂರು ಸರಕಾರದ ಉದ್ದಿಮೆ)
ಚೆನ್ನಾಗಿ ಕಾವು ಕೊಟ್ಟು ಟೆಂಪರುಗೊಳಿಸಿದ
ಶ್ರೇಷ್ಠ ಕಾರ್ಬನ್ ಉಕ್ಕಿನಿಂದ ತಯಾರಿಸಿದ
ಶ್ರೇಷ್ಠ ದರ್ಜೆಯ ಉಪಕರಣಗಳು.
ಸಾಮಾನುಗಳನ್ನು ತೆಗೆದುಕೊಳ್ಳುವ ಮೊದಲೇ ಒರಗೆ ಹಚ್ಚಬಹುದು
ಈ ಉಪಕರಣಗಳು ಅತ್ಯಂತ ಗಟ್ಟಿಯಾಗಿವೆ
ದೀರ್ಘಕಾಲ ಬಾಳಿಕೆ ಬರುತ್ತವೆ
ಇದರಲ್ಲಿ ಹಣ ತೊಡಗಿಸುವುದು ಒಂದು ಸುದೈವ.
ಕಾರಖಾನೆ ಅಥವಾ ಜೋನಲ್ ಏಜೆಂಟರೊಡನೆ ಪತ್ರವ್ಯವಹಾರ ಮಾಡಬಹುದು

ಲ್ಯಾಂಡ್ ಟ್ರೈಬ್ಯುನಲ್

ಬೆಂಗಳೂರು.... 1968 ನೇ ಸೆಪ್ಟಂಬರ್‌ನಲ್ಲಿ ಭೂ ನ್ಯಾಯಮಂಡಲಿ ಮುಂದೆ ನಿರ್ಣಾನವಾಗಬೇಕಾದ ಅರ್ಜಿಗಳು 1027 ಇತ್ತೆಂದೂ, ತೀರ್ಮಾನವಾದವು 13882 ಎಂದೂ ಶಾಸನಸಭೆಯಲ್ಲಿ ತಿಳಿಸಲಾಯಿತು.

*

ಜಗದ್ಗುರುಗಳಿಗೆ ಬೆದರಿಕೆ ಪತ್ರ

ಹುಬ್ಬಳ್ಳಿ— ಒಂದು ಕೋಮಿನ್ನು ಮತ್ತೊಂದು ಕೋಮಿನ ಮೇಲೆ ಎತ್ತಿಕಟ್ಟುತ್ತಿರುವದಾಗಿ ಆಪಾದಿಸಿ, ಮೂರು ಸಾವಿರ ಮಠದ ಜಗದ್ಗುರುಗಳಿಗೆ ಟಿಪ್ಪೂಸೇನೆ ಎಂದು ಕಡೆಯಲ್ಲಿರುವ ಬೆದರಿಕೆ ಪತ್ರ ಬಂದಿರುವದಾಗಿ ವರದಿಯಾಗಿದೆ.

●

ಟಿವಿನ್ಯೂ ಬೋರ್ಡು-ವಜ

ಮದರಾಸು— 167 ವರ್ಷಗಳಿಂದಿರುವ ವೆನಿನ್ಯೂ ಬೋರ್ಡುಗಳನ್ನು ವಜಾಮಾಡಿ ಅದರ ಬದಲು ಇಲಾಖಾ ಮೇಲ್ಪಧಿಕಾರಿಗಳನ್ನು ನೇಮಿಸಲಾಗುವದೆಂದು ತಮಿಳುನಾಡು ಶಾಸನಸಭೆಯಲ್ಲಿ ತಿಳಿಸಲಾಯ್ತು.

ಆಯೂಬರ ಆಪಾದನೆ

ನವದೆಹಲಿ— ಪೂರ್ವ ಪಾಕಿಸ್ತಾನಕ್ಕೆ ಗೊತ್ತಿಲ್ಲದ ಮೂಲದಿಂದ, ತುಪಾಕಿಗಳೂ ಮತ್ತಿತರ ಆಯುಧಗಳೂ ಅಕ್ರಮವಾಗಿ ಬರುತ್ತಿದ್ದು, ಗ್ರಾಮಸ್ಥರಿಗೆ ಹಂಚಲಾಗುತ್ತಿದೆಯೆಂದು ರಾವಲ್ಪಿಂಡಿಯಲ್ಲಿ ಮಾಟಂಗಿನಲ್ಲಿ ಅಧ್ಯಕ್ಷ ಆಯೂಬರು ಹೇಳಿದರು

○

ಸಕ್ಕರೆ

ನವದೆಹಲಿ— ಈ ವರ್ಷ ಸಕ್ಕರೆ ಉತ್ಪಾದನೆ ಸುಮಾರು 30 ಲಕ್ಷ ಟನ್ ಆಗುವ ಅಂದಾಜಿದೆಯೆಂದೂ, ಕಳೆದ ವರ್ಷ 22.48 ಲಕ್ಷ ಟನ್ ಆಗಿತ್ತೆಂದೂ ರಾಜ್ಯಸಭೆಯಲ್ಲಿ ತಿಳಿಸಲಾಯಿತು.

*

3000 ಮೈಲಿ ಓಡುವ ಸ್ಪರ್ಧೆ

ಲಂಡನ್— ವಿಶ್ವದ ಬಹುದರದ 3000 ಮೈಲಿ ಓಟದ ಸ್ಪರ್ಧೆಯು ಏಪ್ರಿಲ್‌ನಲ್ಲಿ ಅಮೇರಿಕಾ ಲಾಸ್ ಏಂಜೆಲ್ಸ್‌ನಿಂದ ಪ್ರಾರಂಭವಾಗುವುದು.

●

ಪುಡ್‌ಲಾಂಡ್ ಶಿನ್ ಜಯಪ್ರದ 3 ನೇ ವಾರ
ಅಮೋಘ ಆರಂಭ
— ಚಿತ್ತಾಕರ್ಷ ಸಾಂಸಾರಿಕ ಹಿಂದಿ ಚಿತ್ರ —
ಘರ್ ಕಾ ಚಿರಾಗ್
ಪಾತ್ರ— ಧರ್ಮೇಂದರ್, ಬಿಶ್ವಜೀತ್, ವಹೀದಾ ರಹಿಮಾನ್,
ಬಾಲರಾಜ್ ಸಹಾನಿ, ದೇವ್ ಕುಮಾರ್
ನಿರ್ದೇಶನ : ಜಗದೇವ್ — ಸಂಗೀತ : ಪೂರ್ಣ ಮೋರ್ಹೆ
[ದಿನ 3 ಪ್ರದರ್ಶನಗಳು]

ಅಪೆರಾ— ಜನಪ್ರಿಯ 3ನೇ ವಾರ
— ಆತ್ಯಮೋಘ ಹಿಂದಿ ಚಿತ್ರ —
ಪರಿವಾರ್
ಮನರಂಜನ ತೆರಿಗೆ ಮನ್ನಾ ಮಾಡಿದೆ ಪೂರ್ಣರಂಜಿತ
ಪಾತ್ರ : ಜಿತೇಂದ್ರ ನಂದ, ರಾಜೇಂದ್ರನಾಥ್, ಓಂ ಪ್ರಕಾಶ್
.... ದಿನವಹಿ 3 ಆಟಗಳು ....

Protect the Cow

Golden Jubilee of 'Satyavadi'

The golden jubilee of the 'Satyavadi' is to be celebrated very soon

The President, the Prime Minister, H.H. the Maharaja of Mysore and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

Rajasabha-bhushana Sri F. K. Irani, Sri M. B. Basaviah, Sri Madhav Shenoi, Sri Opera Talkies, Padmabhushana Dr. M.C. Modi, Dr. R. S. Nanjunda Swamy (Glasgow) Sri Ananthanarasimha Iyengar (Honganur) have generously extended donations and best wishes

It is welknown that golden jubilee of newspapers in India is rare and almost unknown in Mysore State. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, 'Satyavadi', Chamarajapuram, Mysore 4.

Quality Printing — Neat Binding
Lakshminarasimha Press
Sivarampet, Mysore

SHAKTI
SUDHA
A Superb Tonic

Help The Gorakshana

ಆಶೋಕ ಏಜೆನ್ಸೀಸ್
ಅಸ್ಸಾಡ್ ಬಿಲ್ಡಿಂಗ್ಸ್, ಮೈಸೂರು
ಸಿದ್ಧ-ಆಯುರ್ವೇದ ಔಷಧಗಳಾದನ್ನು ಸಿದ್ಧವಿರುವವು.

Edited Printed & Published by Dharmaprachara Niratha M S Krishna Rao (Proprietor) at the Satyavadi Press Chamarajapuram, Mysore 4